ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 28-10-2014

ಕೋಲಾರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 29.10.14 –2.11.14 ವರೆಗೆ)

	29.10.14	30.10.14	31.10.14	01.11.14	02.11.14
ಮಳೆ (ಮಿ ಮಿ)	15	8	5	2	9
ಗರಿಷ್ಠ ಉಷ್ಣಾಂಶ(ಡಿ.ಸೆ.)	27	28	28	27	28
ಕನಿಷ್ಠ ಉಷ್ಣಾಂಶ (ಡಿ.ಸೆ.)	21	20	21	21	20
ಮೋಡ (ಪ್ರಮಾಣ)	7	4	3	4	5
ಆರ್ದ್ರತೆ ೭.೨೦ ಬೆ (ಶೇ)	85	86	84	86	88
ಆರ್ದ್ರತೆ ೨.೨೦ ಮ (ಶೇ)	71	62	62	68	69
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	2	3	4	4
ಗಾಳಿಯ ದಿಕ್ಕು (ಡಿಗ್ರಿ)	130	65	75	100	105

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತವರಣವಿದ್ದು ಸಂಜೆ ಅಥವಾ ರಾತ್ರಿ ವೇಳೆ ಹಗುರದಿಂದ ಸಾಧಾರಣ ಮಳೆಯಾಗುವ ಸಂಭವವಿದೆ.. ದಿನದ ಗರಿಷ್ಠ ಉಷ್ಣಾಂಶ **27.0-28.0°C** ಮತ್ತು ಕನಿಷ್ಠ **20.0-21.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **84-88 %**ಇದ್ದು, ಮಧ್ಯಾಹ್ನ **62-71 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2-4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಮುಂದಿನ ನಾಲ್ಕೈದು ದಿನಗಳಲ್ಲಿ ಮೋಡ ಕವಿದ ವಾತಾವರಣ ಮತ್ತು ಹಗುರ ಮಳೆಯಾಗುವ ಸಂಭವವಿದ್ದು, ರೈತರು ನೆಲಗಡಲೆ ಬೆಳೆ ಕಟಾವು ಮಾಡುವುದನ್ನು ಮುಂದೂಡುವುದು ಸೂಕ್ತ. ತಡವಾಗಿ ಬಿತ್ತನೆಯಾದ ಬೆಳೆಗೆ ಚುಕ್ಕೆ ರೋಗದ ಭಾದೆಯಿದ್ದು ೦.೫ಗ್ರಾಂ ಕಾರ್ಬೆಂಡೈಜಿಮ್ ೧ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವ್ಯದು.
- ತೊಗರಿ ಬೆಳೆಯಲ್ಲಿ ಗೂಡು ಮಾಡುವ ಹುಳು ಅಥವಾ ಕಾಯಿ ಕೊರಕ ಹುಳುಗಳ ಹತೋಟಿಗೆ ಮೆಥೋಮಿಲ್ ೨ಮಿ.ಲೀ ಅಥವಾ ಇಂಡಾಕ್ಸಿಕಾರ್ಬ@ 0.5 ಮಿ.ಲೀ/೧ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು.
- ತೊಗರಿ ಬೆಳೆಯಲ್ಲಿ ಕೆಂಪು ನುಸಿ ಹುಳುಗಳ ಹತೋಟಿಗೆ ಡೈಕೋಫಾಲ್ @ 2.0 ಮಿ.ಲೀ. ನೀರಿಗೆ ಬೆರಸಿ ಸಿಂಪಡಿಸಿ.
- ಬಿತ್ತನೆಯಾಗದಿರುವ ಪ್ರದೇಶದಲ್ಲಿ ಹದವರಿತು ಹುರುಳಿ : ಕೆ.ಬಿ.ಎಹ್-1 ಮತ್ತು ಪಿ.ಎಹ್.ಜಿ-9 ಬೆಳೆಯನ್ನು ಬಿತ್ತುವುದು ಸೂಕ್ತ.
- ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ಜಾನುವಾರುಗಳಿಗೆ ಕಾಲುಬಾಯಿ ರೋಗಕ್ಕೆ ಲಸಿಕೆ ಹಾಕಿಸಿ.
- .

ತಾಂತ್ರಿಕ ಅಧಿಕಾರಿ :
ನಾಗೇಶ್.ಎಲ್
ಕೃ.ವಿ.ವಿ, ಬೆಂಗಳೂರು.

ನೋಡಲ್ ಅಧಿಕಾರಿ :
ಡಾ.ಎನ್.ಎ.ಜನಾರ್ಧನ ಗೌಡ
ಕೃ.ವಿ.ವಿ, ಬೆಂಗಳೂರು.